ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/ವಿಯೋ/09/IITB/2017-18

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ: 08-02-2018

# ಸುತ್ತೋಲೆ

**ವಿಷಯ:** ಪ್ರಸ್ತುತ ಸೆಮಿಸ್ಟರ್‌ನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ IIT, ಮುಂಬೈ ನಡೆಸುತ್ತಿರುವ Spoken Tutorials ಕಾರ್ಯಕ್ರಮದ ಅನುಷ್ಠಾನದ ಬಗ್ಗೆ.

**ಉಲ್ಲೇಖ:** ಈ ಕಛೇರಿಯ ಸಮಸಂಖ್ಯೆ ಸುತ್ತೋಲೆ ದಿನಾಂಕ: 03-07-2018

****

IIT, ಮುಂಬೈ ನಡೆಸುತ್ತಿರುವ Spoken Tutorials ಕಾರ್ಯಕ್ರಮವು ಪ್ರಾಯೋಗಿಕ ಕೋರ್ಸ್‌ಗಳಲ್ಲಿ MOOC ಆಗಿದ್ದು, ಸದರಿ ಕಾರ್ಯಕ್ರಮದ ಮೂಲಕ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಮೂಲಭೂತ ಬಳಕೆ ಮತ್ತು ವಿವಿಧ ಉಪಯುಕ್ತ ಸಾಫ್ಟವೇರ್‌ಗಳಲ್ಲಿ ಉಚಿತವಾಗಿ ತರಬೇತಿ ನೀಡುವ ಉದ್ದೇಶದಿಂದ ಸದರಿ ಕಾರ್ಯಕ್ರಮವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಡ್ಡಾಯವಾಗಿ ಅನುಷ್ಠಾನಗೊಳಿಸುವಂತೆ ಸೂಚಿಸಿ 10-07-2017ರಂದು ಸುತ್ತೋಲೆ ಹೊರಡಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಕಳೆದ ಸೆಮಿಸ್ಟರ್‌ನಲ್ಲಿ ದಿನಾಂಕ: 31-12-2017ರವರೆಗೆ Spoken Tutorials ಕಾರ್ಯಕ್ರಮಕ್ಕೆ ನೋಂದಾಯಿಸಿಕೊಂಡಿರುವ ಮತ್ತು IIT, ಮುಂಬೈ ನಡೆಸುವ ಆನ್‌ಲೈನ್ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುವ ವಿದ್ಯಾರ್ಥಿಗಳ ಅಂಕಿಅಂಶಗಳನ್ನು ಈ ಸುತ್ತೋಲೆಯೊಡನೆ ಲಗತ್ತಿಸಿರುವ ನಮೂನೆ-1 ರಲ್ಲಿ ಭರ್ತಿ ಮಾಡುವಂತೆ ಸೂಚಿಸಲಾಗಿದೆ.

ಕಳೆದ ಸೆಮಿಸ್ಟರ್‌ನಲ್ಲಿ ಹಲವು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸದರಿ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳನ್ನು ನೋಂದಾಯಿಸುವುದನ್ನು ಗಂಭೀರವಾಗಿ ಪರಿಗಣಿಸದಿರುವುದು ಮತ್ತು ಈ ಕುರಿತು ಅಗತ್ಯ ಕ್ರಮ ಕೈಗೊಳ್ಳದಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಪ್ರಸ್ತುತ ಸೆಮಿಸ್ಟರ್‌ನಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಸದರಿ ಕಾರ್ಯಕ್ರಮಕ್ಕೆ ನೋಂದಾಯಿಸಿಕೊಳ್ಳುವಂತೆ ಕ್ರಮವಹಿಸಿ, ಈ ಸಂಬಂಧವಾದ ಮಾಹಿತಿಯನ್ನು ನಮೂನೆ-2ರಲ್ಲಿ ಭರ್ತಿ ಮಾಡುವಂತೆ ಸೂಚಿಸಲಾಗಿದೆ.

ಹೀಗೆ ಭರ್ತಿ ಮಾಡಿದ ನಮೂನೆ (1) ಮತ್ತು (2)ರ ಸಾಫ್ಟ್ ಪ್ರತಿಗಳನ್ನು ಇಲಾಖೆಗೆ ದಿ:14-02-2018ರೊಳಗೆ ಪ್ರಾಂಶುಪಾಲರು ಮತ್ತು ಕಾರ್ಯಕ್ರಮದ ನೋಡಲ್ ಆಫೀಸರ್ ಅವರ ಸಹಿಯೊಡನೆ ಸಾಫ್ಟ್ ಪ್ರತಿಯನ್ನು ಇ-ಮೇಲ್ ವಿಳಾಸ: spokentutorial.dce@gmail.comಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

**ವಿದ್ಯಾರ್ಥಿಗಳ ನೋಂದಣಿಯ ಕುರಿತು ಹೆಚ್ಚಿನ ಮಾಹಿತಿಗಾಗಿ ಐಐಟಿ ಮುಂಬೈನ ಶ್ರೀಮತಿ ಅನುಶ್ರೀ ಧರ್ಮಾಧಿಕಾರಿ ಅವರನ್ನು ಸಂಪರ್ಕಿಸಬಹುದಾಗಿದೆ. Mobile No: 9172113360**
**E-Mail ID: dharmadhikarianushree@gmail.com**

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

ಎಲ್ಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಅಗತ್ಯ ಕ್ರಮಕ್ಕಾಗಿ

ಪ್ರತಿಯನ್ನು:

೧. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ ಮತ್ತು ಕಲ್ಬುರ್ಗಿ – ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ

೨. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕಾಶಿಇ, ಬೆಂಗಳೂರು – ಇಲಾಖಾ ವೆಬ್‌ಸೈಟಿನಲ್ಲಿ ಪ್ರಕಟಿಸಲು

೩. ಕಛೇರಿ ಪ್ರತಿ

## ನಮೂನೆ -1

ಕಾಲೇಜಿನ ಹೆಸರು:
ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ:
ಪ್ರಾಂಶುಪಾಲರ ಹೆಸರು ಮತ್ತು ಮೊಬೈಲ್ ಸಂಖ್ಯೆ:
ನೋಡಲ್ ಆಫೀಸರ್ ಅವರ ಹೆಸರು ಮತ್ತು ಮೊಬೈಲ್ ಸಂಖ್ಯೆ:

| ತರಗತಿ | ಪದವಿ ತರಗತಿಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆ | **Spoken Tutorials** ಗೆ ನೋಂದಾಯಿಸಿಕೊಂಡಿರುವ ವಿದ್ಯಾರ್ಥಿಗಳ ಸಂಖ್ಯೆ – ಕೋರ್ಸ್‌ವಾರು | **Spoken Tutorials** ಗೆ ನೋಂದಾಯಿಸಿಕೊಂಡಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | ಆನ್-ಲೈನ್ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ | ಆನ್-ಲೈನ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ವಿದ್ಯಾರ್ಥಿಗಳ ಸಂಖ್ಯೆ |
|---|---|---|---|---|---|
| | | | | | |
| I Degree | | | | | |
| II Degree | | | | | |
| III Degree | | | | | |
| Post Graduate | | | | | |
| ಒಟ್ಟು ಸಂಖ್ಯೆ | | | | | |

**(ನೋಡಲ್ ಆಫೀಸರ್ ಅವರ ಸಹಿ)** **(ಪ್ರಾಂಶುಪಾಲರ ಸಹಿ)**

## ನಮೂನೆ-2

ಕಾಲೇಜಿನ ಹೆಸರು:
ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ:
ಪ್ರಾಂಶುಪಾಲರ ಹೆಸರು ಮತ್ತು ಮೊಬೈಲ್ ಸಂಖ್ಯೆ:
ನೋಡಲ್ ಆಫೀಸರ್ ಅವರ ಹೆಸರು ಮತ್ತು ಮೊಬೈಲ್ ಸಂಖ್ಯೆ:

| ತರಗತಿ | ಪದವಿ ತರಗತಿಗಳಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆ | ಜನವರಿ 2018ರಿಂದ **Spoken Tutorials** ಗೆ ನೋಂದಾಯಿಸಿಕೊಂಡಿರುವ ವಿದ್ಯಾರ್ಥಿಗಳ ಸಂಖ್ಯೆ – ಕೋರ್ಸ್‌ವಾರು | ಜನವರಿ 2018ರಿಂದ **Spoken Tutorials** ಗೆ ನೋಂದಾಯಿಸಿಕೊಂಡಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ |
|---|---|---|---|
| | | | |
| I Degree | | | |
| II Degree | | | |
| III Degree | | | |
| Post Graduate | | | |
| ಒಟ್ಟು ಸಂಖ್ಯೆ | | | |

(ನೋಡಲ್ ಆಫೀಸರ್ ಅವರ ಸಹಿ) (ಪ್ರಾಂಶುಪಾಲರ ಸಹಿ)

DCE-SS-09-IITB-2017-18